ದಿನಾಂಕ :21-04-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

12. ದಿನಾಂಕಃ 02-04-2019 ರಂದು ಇಬ್ಬರು ಸಾಕ್ಷಿದಾರರಾದ ಚಾಸಾ-4, ಫ್ರಾಸಾ -7 ಆಯುಬ್ ಮುಲ್ಲಾ, ಚಾಸಾ-5 ಫ್ರಾಸಾ-6 ರೋಹಿತ ಶಿತೋಳೆ, ಇವರನ್ನು ಠಾಣೆಗೆ ಕರೆಸಿಕೊಂಡಿದ್ದು,1ನೇ ಆರೋಪಿ ಕೊಲೆ ಮಾಡಿದ ಸ್ಥಳವನ್ನು ತೋರಿಸುತ್ತೇನೆಂದು ಹೇಳಿದ್ದರಿಂದ ಪಾಂಗೇರಿ ಗ್ರಾಮದ 1ನೇ ಆರೋಪಿಯ ಅಜ್ಜಿಯ ಮನೆಗೆ ಕರೆದುಕೂಂಡು ಹೋಗಿ ಸ್ಥಳ ತೋರಿಸಿದ್ದು ಅಲ್ಲಿ 1 ಕಬ್ಬಿಣದ ಸುತ್ತಿಗೆ, ನೆಲಕ್ಕೆ ತಾಗಿದ ಸಗಣಿ ಮಿಶ್ರಿತ ಸಾದಾ ಮಣ್ಣು, ಮತ್ತು ಸಗಣಿ ಸಾರಿಸಿದ ನೆಲದ ಮೇಲೆ ಬಿದ್ದಿದ್ದ ರಕ್ತವನ್ನು ತಾರಿಸಿದ ಸಗಣಿ ಸಮೇತ ಜಪ್ತು ಮಾಡಿ ಬೆಳಿಗ್ಗೆ 6:30 ರಿಂದ 10:00 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿದ್ದೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ-31 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-31(ಸಿ) ಎಂದು ಗುರುತಿಸಲಾಯಿತು ಮತ್ತು ಆ ಸಮಯದಲ್ಲಿ ಪೋಟೋಗಳನ್ನು ತೆಗೆಯಲಾಗಿದೆ. ಅವುಗಳನ್ನು ಕ್ರಮವಾಗಿ ನಿಪಿ-25, ನಿಪಿ-26, ನಿಪಿ-27, ನಿಪಿ-28, ನಿಪಿ-29 ಮತ್ತು ನಿಪಿ-30 ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ಕಚ್ಚಾ ನಕ್ಷೆಯನ್ನು ತಯಾರಿಸಿದ್ದೇನೆ. ನಕ್ಷೆಯನ್ನು ನಿಪಿ-63 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-63(ಎ) ಎಂದು ಗುರುತಿಸಲಾಯಿತು.

13. ದಿನಾಂಕಃ 01-04-2019 ರಂದು 2 ಮತ್ತು 3 ನೇ ಆರೋಪಿಗಳನ್ನು ನಾನು ವಿಚಾರಿಸಿದಾಗ ಅವರು ಕೃತ್ಯ ನಡೆದ ಸಮಯದಲ್ಲಿ ಅವರು ಧರಿಸಿದ ಬಟ್ಟೆಗಳನ್ನು ಬಚ್ಚಿಟ್ಟಿದ್ದು, ಅವರುಗಳನ್ನು ಕರೆದುಕೊಂಡು ಹೋದರೆ ಅವುಗಳನ್ನು ತೋರಿಸಿ ಹಾಜರುಮಾಡುವುದಾಗಿ ಸ್ವ ಇಚ್ಚೆ ಹೇಳಿಕೆಯನ್ನು ನೀಡಿದ್ದರು.

14. 2ನೇ ಆರೋಪಿ ಸೌರಭ ಅಥಣಿ ತನ್ನ ಸ್ವ ಇಚ್ಛೆ ಹೇಳಿಕೆಯಲ್ಲಿ " ನನಗೆ ಕರೆದುಕೊಂಡು ಹೋದರೆ ನಾನು ಅರವಿಂದನ ಕೊಲೆ ಮಾಡಲು ಸಂಚು ಮಾಡಿದ ಸ್ಥಳ, ಕೊಲೆ ಮಾಡಿದ ಸ್ಥಳ, ಆಯುಧ ಮತ್ತು ಅವನ ಶವವನ್ನು ಒಗೆದ ಸ್ಥಳ, ಚಾಪೆ, ಬಿಯರ್ ಬಾಟಲಿ, ಮೃತನ ರಕ್ತವನ್ನು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಕಟ್ಟಿಕೊಂಡಿದ್ದು, ಮೃತನ ರಕ್ತ ಹತ್ತಿದ ಶರ್ಟ್, ಬನಿಯನ್, ನಿಕ್ಕರ್ ಒಗೆದ ಸ್ಥಳ, ಸ್ಕೂಟರ್ ಬಿಟ್ಟ ಸ್ಥಳ ಮತ್ತು ಅವನ ಸ್ಕೂಟರ್, ಶವ ಸಾಗಿಸಿದ ಕಾರನ್ನು ತೋರಿಸುತ್ತೇನೆ ಮತ್ತು ಕೊಲೆ ಮಾಡುವ ಕಾಲಕ್ಕೆ ನನ್ನ ಮೈಮೇಲೆ ಇದ್ದ ಬಟ್ಟೆಗಳನ್ನು ತೋರಿಸಿ ಹಾಜರುಮಾಡುತ್ತೇನೆ." ಎಂದು ಹೇಳಿಕೆ ನೀಡಿದ್ದಾರೆ, 2ನೇ ಆರೋಪಿಯ ಹೇಳಿಕೆಯ ಭಾಗವನ್ನು ನಿಪಿ–64 ಎಂದು ಗುರುತಿಸಲಾಯಿತು.

15. 3ನೇ ಆರೋಪಿಯು ವಿಚಾರಣೆಯ ಸಮಯದಲ್ಲಿ " ನನಗೆ ಕರೆದುಕೊಂಡು ಹೋದರೆ ನಾನು ಅರವಿಂದ ಇವನಿಗೆ ಕೊಲೆ ಮಾಡಲು ಸಂಚು ಮಾಡಿದ ಸ್ಥಳ, ಸತೀಶ ಮತ್ತು ಸೌರಭ ಕೂಡಿ ಅವವಿಂದನ ಕೊಲೆ ಮಾಡಿದ ಸ್ಥಳ, ಆಯುಧ ಮತ್ತು ಅವನ ಶವವನ್ನು ಒಗೆದ ಸ್ಥಳ, ಚಾಪೆ, ಬಿಯರ್ ಬಾಟಲಿ, ಮೃತನ ರಕ್ತವನ್ನು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಕಟ್ಟಿಕೊಂಡಿಕೊಂಡಿದ್ದನ್ನು ಮತ್ತು ಮೃತನ ರಕ್ತ ಹತ್ತಿದ ಶರ್ಟ್, ಬನಿಯನ್, ನಿಕ್ಕರ ಗಳನ್ನು ಒಗೆದ ಸ್ಥಳ, ಸ್ಕೂಟರ್ ಬಿಟ್ಟ ಸ್ಥಳ ಮತ್ತು ಅವನ ಸ್ಕೂಟರ್, ಶವ ಸಾಗಿಸಿದ ಕಾರನ್ನು ತೋರಿಸುತ್ತೇನೆ ಮತ್ತು ಮೃತನ ಹೆಣ ಸಾಗಿಸುವ ಕಾಲಕ್ಕೆ ನನ್ನ ಮೈಮೇಲೆ ಇದ್ದ ಬಟ್ಟೆಗಳನ್ನು ತೋರಿಸಿ ಹಾಜರುಪಡಿಸುತ್ತೇನೆ." ಎಂದು ಹೇಳಿಕೆ ನೀಡಿದ್ದಾರೆ, 3ನೇ ಆರೋಪಿಯ ಹೇಳಿಕೆಯ ಭಾಗವನ್ನು ನಿಪಿ–65 ಎಂದು ಗುರುತಿಸಲಾಯಿತು.

16. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಮರದ ಹಿಡಿ ಇರುವ ಕಬ್ಬಿಣದ ಸುತ್ತಿಗೆಯನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾ.9 ಎಂದು

ಗುರುತಿಸಲಾಗಿದೆ. ಒಣಗಿದ ಸಗಣಿ ನೆಲದ ಮೇಲೆ ಬಿದ್ದಿದ್ದ ಸಾದಾ ಮಣ್ಣನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ.21 ಎಂದು ಗುರುತಿಸಲಾಗಿದೆ. ಸಗಣಿ ತಾಗಿಸಿದ ನೆಲದ ಮೇಲೆ ಬಿದ್ದಿದ್ದ ರಕ್ತ ಹತ್ತಿದ ರಕ್ತವನ್ನು ಜಪ್ತು ಮಾಡಿದ್ದು ಅದನ್ನು ಈಗ ಸಾಕ್ಷಿ ನೋಡಿ ಗುರುತಿಸಿದ್ದಾರೆ ಅದನ್ನು ಈಗಾಗಲೇ ಮು.ಮಾ.22 ಎಂದು ಗುರುತಿಸಲಾಗಿದೆ.

17. ದಿನಾಂಕ: 02-04-2019 ರಂದು ಬೆಳಿಗ್ಗೆ 10:00 ಗಂಟೆಯ ಸಮಯದಲ್ಲಿ ಸಾಕ್ಷಿದಾರರಾದ ಚಾಸಾ-6, ಪ್ರಾಸಾ-8 ನೂತನ್ ರಾಜ್ ಕದಂಬ, ಮತ್ತು ಚಾಸಾ-7 ಪ್ರಾಸಾ-5 ರಾಜು ಕಲ್ಲಯ್ಯ ಹೀರೆಮಠ ಇವರುಗಳನ್ನು ಅಕ್ಕೋಳ ಗ್ರಾಮದ ಸರ್ಕಾರಿ ಆಸ್ಪತ್ರೆಯ ಎದುರಿನಲ್ಲಿ ಕರೆಸಿಕೊಂಡಿದ್ದು, ಪ್ರಕರಣದ ಬಗ್ಗೆ ಅವರಿಗೆ ತಿಳಿಸಿ 3 ಜನ ಆರೋಪಿತರು ವಿಚಾರ ಹೇಳಿ, ಎಲ್ಲಿಗೆ ಕರೆದುಕೊಂಡು ಹೋಗಿ, ಯಾವ ವಸ್ತುಗಳನ್ನು ಹಾಜರುಮಾಡುತ್ತಾರೋ ಅವುಗಳನ್ನು ಪಂಚನಾಮೆ ಮಾಡಿ ಜಪ್ತುಮಾಡಿರುವುದು ಇದೆ ಎಂದು ಹೇಳಿರುತ್ತೇನೆ. ಸಾಕ್ಷಿದಾರರನ್ನು ಆರೋಪಿತರೊಂದಿಗೆ, ಆರೋಪಿತರು ಹೇಳಿ ತೋರಿಸಿಂದತೆ ಅಕ್ಕೋಳ ಗ್ರಾಮದ ಸರ್ಕಾರಿ ಆಸ್ಪತ್ರೆಯ ಮುಂಭಾಗದಿಂದ ಹೊರಟು ಜತ್ರಾಟ್ ಗ್ರಾಮ ರಸ್ತೆಯಲ್ಲಿ 3ನೇ ಆರೋಪಿ ರವಿ ಶಿರಗಾಂವಿ ಇತನು ಗಾಡಿಯಿಂದ ಕೆಳಗೆ ಇಳಿದು, ರಸ್ತೆಯ ದಕ್ಷಿಣದ ಬದಿಗೆ ಇರುವ ನೀರು ಹರಿಯುವ ಹಳ್ಳದ ಹತ್ತಿರ ಕರೆದುಕೊಂಡು ಹೋಗಿ ಸ್ಥಳ ತೋರಿಸಿ, ರಕ್ತ ಹತ್ತಿದ ಕೈ ಚೀಲ ಮತ್ತು ಗೋಣಿ ಚೀಲವನ್ನು ಬಿಸಾಡಿದ ಜಾಗ ಎಂದು ಹೇಳಿದ್ದಲ್ಲದೇ ಅದನ್ನು ತೆಗೆದುಕೊಂಡು ಬಂದು ಹಾಜರುಮಾಡಿದ್ದಾರೆ. ನಾನು ಗೋಣಿ ಚೀಲವನ್ನು ತೆಗೆದು ನೋಡಲಾಗಿ ಹಳದಿ, ಹಸಿರು, ಗುಲಾಬಿ ಮತ್ತು ನೀಲಿ ಬಣ್ಣದ ಪ್ಲಾಸ್ಟಿಕ್ ಚಾಪೆ ಇತ್ತು, ಅದಕ್ಕೆ ಅಲ್ಲಲ್ಲಿ ರಕ್ತ ಆಗಿತ್ತು, ಒಂದು ಕಿಂಗ್ ಪೀಶರ್ ನ ಖಾಲಿ ಬಿಯರ್ ಬಾಟಲ್ ಇದ್ದು ಅದಕ್ಕೆ ಅಲ್ಲಲ್ಲಿ ರಕ್ತ ಆಗಿತ್ತು, ಒಂದು ಸಣ್ಣ ಅಲ್ಯೂಮಿನಿಯಂ ಪ್ಲೇಟ್ ಇದ್ದು ಅದಕ್ಕೂ ಕೂಡ ಅಲ್ಲಲ್ಲಿ ರಕ್ತ ಆಗಿತ್ತು, 2 ಪ್ಲಾಸ್ಟಿಕ್ ಗ್ಲಾಸ್ ಗಳಿದ್ದವು. ಪ್ಲಾಸ್ಟಿಕ್ ಚಾಪೆಯನ್ನು ಈಗಾಗಲೇ ಮು.ಮಾ.3 ಎಂದು, ಖಾಲಿ

ಬಿಯರ್ ಬಾಟಲಿಯನ್ನು ಮು.ಮಾ.1, ಅಲ್ಯೂಮಿನಿಯಂ ಪ್ಲೇಟ್ ನ್ನು ಮು.ಮಾ.10 ಎಂದು, ಪ್ಲಾಸ್ಟಿಕ್ ಗ್ಲಾಸ್ ಗಳನ್ನು ಮು.ಮಾ.10 ಎಂದು ಮತ್ತು ಗೋಣಿ ಚೀಲವನ್ನು ಮು. ಮಾ.4 ಎಂದು ಗುರುತಿಸಲಾಗಿದೆ. ಪ್ಲಾಸ್ಟಿಕ್ ಚೀಲದಲ್ಲಿದ್ದ ಒಂದು ನೀಲಿ ಮತ್ತು ಬಿಳಿ ಬಣ್ಣದ ಶರ್ಟ್ ನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ.5 ಎಂದು ಗುರುತಿಸಲಾಗಿದೆ. ಒಂದು ನೀಲಿ ಬಣ್ಣದ ತುಂಬು ತೋಳಿನ ಜೀನ್ಸ ಶರ್ಟ್ ಕುತ್ತಿಗೆಯ ಮೇಲೆ ಒಳಭಾಗದಲ್ಲಿ Club Guys XL ಎಂದು ಬರೆದಿದ್ದು ಅದನ್ನು ಈಗಾಗಲೇ ಮು. ಮಾ.15 ಎಂದು ಗುರುತಿಸಲಾಗಿದೆ. ಒಂದು ಹಳದಿ ಬಣ್ಣದ ಪ್ಲಾಸ್ಟಿಕ್ ಕೈ ಚೀಲವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದರ ಮೇಲೆ ದಾವತ್ ಬಾಸುಮತಿ ರೈಸ್ ಎಂದು ಬರೆದಿದ್ದು ಅದನ್ನು ಈಗಾಗಲೇ ಮು.ಮಾ.2 ಎಂದು ಗುರುತಿಸಲಾಗಿದೆ. ಗೋಣಿ ಚೀಲದ ತುಂಡುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.7 ಎಂದು ಈಗಾಗಲೇ ಗುರುತಿಸಲಾಗಿದೆ. ಗೋಣಿ ಚೀಲದಲ್ಲಿ ಖಾಲಿ ಪ್ಲಾಸ್ಟಿಕ್ ಕವರುಗಳು ಇದ್ದು ಅದನ್ನು ಸಹ ಜಪ್ತು ಮಾಡಿದ್ದೇನೆ ಎಂದು ಹೇಳುತ್ತಾರೆ. ಒಂದು ಬಿಳಿ ಬಣ್ಣದ ಬಟ್ಟೆಯಿಂದ ಸುತ್ತಿದ ಒಂದು ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿ ಒಂದು ಖಾಲಿ ಬಿಳಿ ಪ್ಲಾಸ್ಟಿಕ್ ಕವರ 2 ಕಪ್ಪು ಖಾಲಿ ಪ್ಲಾಸ್ಟಿಕ್ ಕವರುಗಳು ಇದ್ದವು ಎಂದು ಸಾಕ್ಷಿ ಗುರುತಿಸಿದ್ದಾರೆ, ಅವುಗಳನ್ನು ಒಟ್ಟಾರೆಯಾಗಿ ಮು.ಮಾ.29 ಎಂದು ಗುರುತಿಸಲಾಯಿತು. ಈ ಎಲ್ಲಾ ವಸ್ತುಗಳನ್ನು ನಾನು ಸ್ಥಳದಲ್ಲಿ ಪ್ರತ್ಯೇಕವಾಗಿ ಒಂದು ಬಿಳಿ ಬಣ್ಣದ ಬಟ್ಟೆಯಲ್ಲಿ ಭಾಂಗಿ ಮಾಡಿ ಅದರ ಮೇಲೆ ಬಿ.ಸಿ.ಪಿ.ಎಸ್. ಎಂದು ಸೀಲ್ ಮಾಡಿದ್ದೇನೆ. ಆ ಸಮಯದಲ್ಲಿ ಮೃತನ ಮೈ ಮೇಲಿದ್ದ ಬನಿಯನ್ ಮತ್ತು ನಿಕ್ಕರ್ ನ್ನು ಹುಡುಕಿರುತ್ತೇನೆ, ಆದರೆ ಸಿಕ್ಕಿರುವುದಿಲ್ಲ. ಈ ಪಂಚನಾಮೆಯನ್ನು ಬೆಳಿಗ್ಗೆ 10:30 ರಿಂದ 11:30 ವರೆಗೆ ತಯಾರಿಸಿದ್ದೇನೆ. ಪಂಚನಾಮೆಯನ್ನು ನಿಪಿ-13 ಎಂದು ಈಗಾಗಲೇ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-13(ಸಿ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ಫೋಟೋಗಳನ್ನು ತೆಗೆಯಲಾಗಿದ್ದು

ಅವುಗಳನ್ನು ನಿಪಿ-14 ಮತ್ತು ನಿಪಿ-15 ಎಂದು ಗುರತಿಸಲಾಗಿದೆ.

18. ದಿನಾಂಕಃ 02-04-2019 ರಂದು 11:45 ರಿಂದ 12:30 ವರೆಗೆ 1ನೇ ಆರೋಪಿ ಸತೀಶ ಇತನು ಮೃತ ಅರವಿಂದನ ಮೋಟರ್ ಸೈಕಲ್ ನಂ.ಕೆಎ-23/ಇಎ-6375 ನ್ನು ತಾನು ನಿಲ್ಲಿಸಿದ್ದು ಅದನ್ನು ತೋರಿಸಿ ಹಾಜರು ಮಾಡುತ್ತೇನೆಂದು ಹೇಳಿದ್ದರಿಂದ ಚಾಸಾ-6 ಮತ್ತು ಚಾಸಾ-7 ರವರನ್ನು ಆರೋಪಿಗಳ ಜೊತೆಯಲ್ಲಿ ಜತ್ರಾಟ್ ಅಕ್ಕೋಳ ರಸ್ತೆಯ ಬದಿಯಲ್ಲಿ ಕರೆದುಕೊಂಡು ಹೋಗಿ ಸ್ಥಳ ತೋರಿಸಿದ್ದು, ಆ ಸ್ಥಳದಲ್ಲಿ ನಿಂತಿದ್ದ ಕೆಂಪು ಬಣ್ಣದ Access 125 ಸ್ಕೂಟರ್ ನ್ನು ತೋರಿಸಿ ಅದು ಮೃತ ಅರವಿಂದನದ್ದು ಎಂದು ಹೇಳಿದನು ಮತ್ತು ಸದರಿ ಸ್ಕೂಟರಿನ ಡಿಕ್ಕಿ ತೆಗೆದು ಅದರಲ್ಲಿದ್ದ ಇದ್ದ ಒಂದು ಮೊಬೈಲ್ ನ್ನು ತೆಗೆದು ಅದು ಮೃತ ಅರವಿಂದನದ್ದು ಎಂದು ತೋರಿಸಿದನು. ನಾನು ಸದರಿ ಸ್ಕೂಟರ್ ಮತ್ತು ಮೊಬೈಲ್ ನ್ನು ಸಾಕ್ಷಿದಾರರ ಸಮಕ್ಷಮ ಜಪ್ತು ಮಾಡಿ ನಿಪಿ-18 ರಂತೆ ಪಂಚನಾಮೆಯನ್ನು ಮಾಡಿದ್ದೇನೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-18(ಸಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೋಟೋ ತೆಗೆಯಲಾಗಿದೆ. ಜಪ್ತಾದ ಪೋಟೋಗಳನ್ನು ಈಗಾಗಲೇ ನಿಪಿ-16 ಮತ್ತು ನಿಪಿ-17 ಎಂದು ಗುರುತಿಸಲಾಗಿದೆ. ಮೊಬೈಲ್ ನ್ನು ಒಂದು ಬಿಳಿ ಬಣ್ಣದ ಬಟ್ಟೆಯಲ್ಲಿ ಸುತ್ತಿ ಬಿ. ಸಿ. ಪಿ. ಎಸ್. ಎಂದು ಸೀಲ್ ಮಾಡಿದ್ದೇನೆ.

19. ನಂತರ ದಿನಾಂಕಃ 02-04-2019 ರಂದು 3 ಜನ ಆರೋಪಿತರು ಶವ ಬಿಸಾಡಿದ ಸ್ಥಳವನ್ನು ತೋರಿಸುತ್ತೇವೆಂದು ಹೇಳಿ ನಾಗನೂರು ಗ್ರಾಮದ ಹದ್ದಿನಲ್ಲಿರುವ ಡವಳಕರ್ ಪಾಟೀಲ್ ರವರ ಹೊಲದಲ್ಲಿರುವ ನೀರಿನ ಕಲ್ಲಿನ ಖಣಿವೆಗೆ ಕರೆದುಕೊಂಡು ಹೋಗಿ ಜಾಗ ತೋರಿಸಿದ್ದಾರೆ. ದಿನಕರ್ ತುಕಾರಮ ಕಾಂಬಳೆ ಎಂಬ ಇಜುಗಾರರನ್ನು ಸ್ಥಳಕ್ಕೆ ಕರೆಸಿದ್ದೇವು. ಆರೋಪಿತರು ಹೇಳಿದ ಸ್ಥಳದಲ್ಲಿ ಹುಡಿಕಿಸಿರುತ್ತೇನೆ. ಆರೋಪಿತರು

ಈಜುಗಾರನ ಮುಂದೆ ಶವಕ್ಕೆ ಪ್ಲಾಸ್ಟಿಕ್ ಕವರನ್ನು ಸುತ್ತಿ, ದೇಹವನ್ನು ಬಟ್ಟೆಗಳಿಂದ ಹೋಲೆದ ದುಬಟಿಯಿಂದ ಸುತ್ತಿ, 2 ಕಾಲುಗಳನ್ನು ಖಾತಿ ಹಗ್ಗದಿಂದ ಕಟ್ಟಿ, ಕುತ್ತಿಗೆಯನ್ನು ಪ್ಲಾಸ್ಟಿಕ್ ಹಗ್ಗದಿಂದ ಸುತ್ತಿ, ಕಣಿವೆಯಲ್ಲಿ, 2–3 ಕಚ್ಚಾ ಮೆಟ್ಟಿಲುಗಳನ್ನು ಇಳಿದು, ಕೆಳಗೆ ಒಂದು ಅಗಲವಾದ ಸ್ಥಳದಲ್ಲಿ ಬಿಸಾಡಿದ್ದೇವೆ ಎಂದು ತೋರಿಸಿದ್ದರು. ಈಜುಗಾರರಾದ ಚಾಸಾ–20 ಫ್ರಾಸಾ –16 ದಿನಕರ್ ತುಕಾರಮ ಕಾಂಬಳೆ ಇವರು ಆಕ್ಸಿಜನ್ ಸಹಾಯದಿಂದ ನೀರಿನ ಒಳಗೆ ಮುಳಗಿ 10 ನಿಮಿಷದ ನಂತರ ನೀರಿದಿಂದ ಶವವನ್ನು ಮೇಲೆ ತೆಗೆದನು. ನಂತರ ನಾನು ಸ್ಥಳದಲ್ಲಿ ಪೋಟೋ ತೆಗೆದಿರುತ್ತೇನೆ. ಆ ಪೋಟೋಗಳನ್ನು ಈಗಾಗಲೇ ನಿಪಿ–7, ನಿಪಿ–8, ನಿಪಿ–9 ಮತ್ತು ನಿಪಿ–56 ಎಂದು ಗುರುತಿಸಲಾಗಿದೆ. ಸದರಿ ಸ್ಥಳದಲ್ಲಿ ಪಂಚನಾಮೆಯನ್ನು 12:45 ರಿಂದ 01:00 ಗಂಟೆಯವರೆಗೆ ಮಾಡಿದ್ದೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ–11 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–11(ಸಿ) ಎಂದು ಗುರುತಿಸಲಾಯಿತು. ಶವವನ್ನು ಹೊರಗೆ ಇರಿಸಿದ ಸ್ಥಳದಲ್ಲಿ ಶವ ಪಂಚನಾಮೆಯನ್ನು ಮಾಡಿದ್ದೇನೆ. ಶವ ಪಂಚನಾಮೆಯನ್ನು ಮೃತನ ಸಹೋದರ ಅಜೀತ ಗೌರಿ ಶಂಕರ ಪೋಳ ರವರು ಗುರುತಿಸಿದ್ದಾರೆ. ಶವ ಪಂಚನಾಮೆಯನ್ನು 13:30 ರಿಂದ 14:45 ವರೆಗೆ ಮಾಡಿದ್ದೇನೆ. ಅದನ್ನು ಈಗಾಗಲೇ ನಿಪಿ–6 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ–6(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಕಾಲಕ್ಕೆ 5 ಅಡಿ 2 ಇಂಚು ಅಳತೆಯ ಖಾತಿ ಹಗ್ಗ, ಒಂದು ದಾವತ್ ಬಾಸುಮತಿ ಅಕ್ಕಿ ಎಂದು ಬರೆದಿದ್ದ ಒಂದು ಪ್ಲಾಸ್ಟಿಕ್ ಚೀಲ, ನೀಲಿ ಮತ್ತು ತಿಳಿ ನೀಲಿ ಬಣ್ಣದ ಸೀರೆಯಿಂದ ಹೊಲೆದ ದುಬಟಿಯನ್ನು ಮತ್ತು ಮೃತನ ಪ್ಯಾಂಟ್ ಜೇಬಿನಲ್ಲಿದ್ದ ಕಪ್ಪು ಮತ್ತು ಬ್ರೌನ್ ಬಣ್ಣದ ಪರ್ಸ ನ್ನು ಜಪ್ತು ಮಾಡಿದ್ದು, ಮೃತನ ಆಧಾರ ಕಾರ್ಡ ಮತ್ತು ಚುನಾವಣಾ ಗುರುತಿನ ಚೀಟಿ ಇದ್ದು ಅವುಗಳನ್ನು ನಾನು ಜಪ್ತು ಮಾಡಿದ್ದೇನೆ. ಈಗ ನಾನು ಅವುಗಳನ್ನು ನೋಡಿ ಗುರುತಿಸಿದ್ದೇನೆ. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಬಿಳಿ ಬಣ್ಣದ ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿದ್ದ ನೀಲಿ ಮತ್ತು

ಬ್ರೌನ್ ಬಣ್ಣದ ಪ್ಲಾಸ್ಟಿಕ್ ಹಗ್ಗವನ್ನು ಸಾಕ್ಷಿ ಗುರುತಿಸಿದ್ದಾರೆ, ಅದನ್ನು ಮು ಮಾ 30 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ನ್ಯಾಯಾಲಯದ ಮುಂಜಾನೆ ಅವಧಿ ಮುಗಿದಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮಧ್ಯಾಹ್ನದ ಅವಧಿಗೆ ಕಾಯ್ದಿರಿಸಲಾಯಿತು.

ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

20. ಶವ ಪಂಚನಾಮೆ ಕಾಲದಲ್ಲಿ ಸ್ಥಳದಲ್ಲಿದ್ದ ತೆಂಗಿನ ನಾರಿನ ಹಗ್ಗ ಸೂಮಾರು 5 ಅಡಿ 4 ಇಂಚು ಅಗಲದ ಹಗ್ಗವನ್ನು ಸಾಕ್ಷಿ ಗುರುತಿಸಿದ್ದಾರೆ. ನ್ಯಾಯಾಲಯದಲ್ಲಿ ಹಾಜರುಮಾಡಿದ ಪ್ರತ್ಯೇಕವಾದ 2 ಪ್ಲಾಸ್ಟಿಕ್ ಕವರುಗಳಲ್ಲಿದ್ದ ವಸ್ತುಗಳನ್ನು ನ್ಯಾಯಾಲಯದಲ್ಲಿ ತೆರೆಯಲಾಯಿತು. ತೆಂಗಿನ ನಾರಿನ ಹಗ್ಗವನ್ನು ಮು ಮಾ 31 ಎಂದು ಗುರುತಿಸಲಾಯಿತು. ಅದನ್ನು ಮೃತನ ಮುಖಕ್ಕೆ ಸುತ್ತಿದ ದಾವತ್ ರೋಸಾನಾ ಬಾಸುಮತಿ ರೈಸ್ ರೆಂಜ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು ಮಾ 32 ಎಂದು ಗುರುತಿಸಲಾಯಿತು. ಬಿಳಿ ಬಣ್ಣದ ಬಟ್ಟೆ ಯಿಂದ ಸುತ್ತಿರುವ ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿರುವ ಪ್ಲಾಸ್ಟಿಕ್ ಬ್ಯಾಗ್ ನಲ್ಲಿದ್ದ ಹಸಿರು, ಕಾಡು ನೀಲಿ, ಹಾಗೂ ಗುಲಾಬಿ ಬಣ್ಣದ ಬಟ್ಟೆಯಿಂದ ಹೋಲದಿರುವ ದುಬಟಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಈಗ ಮು ಮಾ–33 ಎಂದು ಗುರುತಿಸಲಾಯಿತು. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಬಿಳಿ ಬಣ್ಣದ ಬಟ್ಟೆಯಿಂದ ಸುತ್ತಿದ ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿ ಪ್ಲಾಸ್ಟಿಕ್ ಕವರ್ ನಲ್ಲಿದ್ದ ಮೇಲ್ಬಾಗದಲ್ಲಿ ಬ್ರೌನ್ ಬಣ್ಣದ ಹಾಗೂ ಒಳಗಡೆ ಕಪ್ಪು ಬಣ್ಣದಿಂದ ಕೂಡಿದ ಒಂದು ಪರ್ಸನ್ನು ಅದರ ಒಳಗೆ ಇದ್ದ ಮೃತನ ಆಧಾರ ಕಾರ್ಡ ಮತ್ತು

ಮೃತನ ಚುನಾವಣಾ ಗುರುತಿನ ಚೀಟಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಪರ್ಸನ್ನು ಮು ಮಾ–34 ಎಂದು, ಆಧಾರ ಕಾರ್ಡನ್ನು ಮು ಮಾ–35 ಎಂದು, ಹಾಗೂ ಗುರುತಿನ ಚೀಟಿಯನ್ನು ಮು ಮಾ–36 ಎಂದು ಗುರುತಿಸಲಾಯಿತು. ಮು ಮಾ–34 ರ ಒಳಗೆ ಸ್ಟ್ಯಾಂಪ್ ಅಳತೆಯ ಒಂದು ಪೋಟೋ ಇರುತ್ತದೆ.

21. ಶವಪಂಚನಾಮೆ ಸಮಯದಲ್ಲಿ ತೆಗೆಯಲಾದ ಪೋಟೊವನ್ನು ನಿಪಿ–5 ಎಂದು ಗುರುತಿಸಲಾಗಿದೆ. ಶವದ ಮರಣೋತ್ತರ ಸಮಯದಲ್ಲಿ ಶವದ ಮೈಮೇಲಿದ್ದ ಗಾಯಿಗಳನ್ನು ಗುರುತಿಸುವ ಸಲುವಾಗಿ ತೆಗೆಯಲಾದ ಪೋಟೋಗಳು ಎಂದು ಅವುಗಳನ್ನು ಗುರುತಿಸಿದ್ದಾರೆ. ಅವುಗಳನ್ನು ಈಗ ನಿಪಿ–66, ನಿಪಿ–67 ಮತ್ತು ನಿಪಿ–68, ಎಂದು ಗುರುತಿಸಲಾಯಿತು.

22. ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಸರ್ಕಾರಿ ಆಸ್ಪತ್ರೆ ನಿಪ್ಪಾಣಿಗೆ ಮನವಿ ಪತ್ರದೊಂದಿಗೆ ಕಳುಹಿಸಿ ಕೊಟ್ಟಿರುತ್ತೇನೆ. ಪತ್ರವನ್ನು ಕ್ರಮವಾಗಿ ನಿಪಿ–69 ಮತ್ತು ನಿಪಿ–70 ಎಂದು ಗುರುತಿಸಲಾಯಿತು. ಅವುಗಳನ್ನು ಸಾಕ್ಷಿಯ ಸಹಿಗಳನ್ನು ನಿಪಿ–69(ಎ) ಮತ್ತು ನಿಪಿ–70(ಎ) ಎಂದು ಗುರುತಿಸಲಾಯಿತು.

23. ಮರಣೋತ್ತರ ಪರೀಕ್ಷೆ ಸಮಯದಲ್ಲಿ ಮೃತನ ಮೈಮೇಲಿದ್ದ ಬಟ್ಟೆಗಳನ್ನು ವೈದ್ಯರು ತೆಗೆದು ಚಾಸಾ–26 ರವರಿಗೆ ನೀಡಿದ್ದು, ಅವರು ಅದನ್ನು ಸ್ವೀಕರಿಸಿಕೊಂಡು ನನ್ನ ಮುಂದೆ ವರದಿಯೊಂದಿಗೆ ನನ್ನ ಮುಂದೆ ಹಾಜರುಮಾಡಿರುತ್ತಾರೆ. ನಾನು ಅದನ್ನು ಪಂಚಸಾಕ್ಷಿದಾರರಾದ ಚಾಸಾ–8 ದೀಲಿಪ್ ಮತ್ತು ಚಾಸಾ–9 ಅರ್ಜುನ ಇವರ ಸಮಕ್ಷಮ ನಿಪಿ–40 ರಂತೆ 20:45 ರಿಂದ 21:30 ವರೆಗೆ ಪಂಚನಾಮೆಯನ್ನು ಮಾಡಿ ಜಪ್ತು ಮಾಡಿಕೊಂಡಿರುತ್ತೇನೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–40(ಸಿ) ಎಂದು

ಗುರುತಿಸಲಾಯಿತು. ನಿಪಿ–40 ಅಡಿಯಿಲ್ಲಿ ಜಪ್ತು ಮಾಡಿದ ಕಾಕಿ ಬಣ್ಣದ ಪ್ಯಾಂಟ್ ನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ.24 ಎಂದು ಗುರುತಿಸಲಾಗಿದೆ.

24. ದಿನಾಂಕಃ 03–04–2019 ರಂದು ಆರೋಪಿತರು ಶವವನ್ನು ಸಾಗಿಸಲು ಬಳಸಿದ ಬಿಳಿ ಬಣ್ಣದ ಸ್ವಿಫ್ಟ್ ಡಿಸೈಯರ್ ಕಾರ್ ಎಮ್. ಹೆಚ್. 04 ಡಿ ಎನ್ 4432 ಕಾರನ್ನು 1ನೇ ಆರೋಪಿ ಸತೀಶ ನಿಪ್ಪಾಣಿ ತಾಲ್ಲೂಕಿನ ಅಕೋಳ ವೃತ್ತದಲ್ಲಿರುವ ಭಾಟ್ ಗಲ್ಲಿ ಚಾಸಾ–16 ಫ್ರಾಸಾ–13 ಶುಭಂ ಶೆಟ್ಕ್ ಅವರ ಮನೆಯ ಮುಂದೆ ಇದ್ದ ಕಾರನ್ನು ತೋರಿಸಿರುತ್ತಾರೆ. ಆ ವಿಚಾರವಾಗಿ ಚಾಸಾ–16 ರವರನ್ನು ಸಹ ಸದರಿ ಕಾರನ್ನು ಬಾಡಿಗೆ ನೀಡಿದ ಬಗ್ಗೆ ಖಚಿತಪಡಿಸಿಕೊಂಡು ನಿಪಿ–50 ಮತ್ತು ನಿಪಿ–50(ಎ) ಪ್ರಕಾರವಾಗಿ ಹೇಳಿಕೆ ಪಡೆದಿರುತ್ತೇನೆ. ಸದರಿ ಸ್ಥಳದಿಂದ ಕಾರನ್ನು ಜಪ್ತು ಮಾಡಿರುತ್ತೇನೆ. ಕಾರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಕಾರು ಪೋಲಿಸ್ ಠಾಣೆಯಲ್ಲಿ ಇದ್ದು ಮತ್ತು ಅದು ಚಾಲನೆಗೊಳ್ಳುವ ಸ್ಥಿತಿಯಲ್ಲಿ ಇರುವುದಿಲ್ಲ ಎಂದು ಪೋಲಿಸರು ಹೇಳಿರುತ್ತಾರೆ. ತನಿಖಾಧಿಕಾರಿಯಾಗಿ ಕಾರನ್ನು ಜಪ್ತು ಮಾಡಿರುವ ಕಾರಣ ನಿಪಿ–19 ರಲ್ಲಿ ಕಾಣುವ ಬಿಳಿ ಬಣ್ಣದ ಸ್ವಿಫ್ಟ್ ಡಿಸೈಯರ್ ಕಾರ ಎಮ್. ಹೆಚ್. 04/ ಡಿ ಎನ್ 4432 ಕಾರನ್ನು ಈಗ ಮು ಮಾ–37 ಎಂದು ಗುರುತಿಸಲಾಯಿತು. ಕಾರಿನ ಮಾಲೀಕರಾದ ಚಾಸಾ–16 ಫ್ರಾಸಾ–13 ಶುಭಂ ಅವರಿಗೆ ಕಾರಿನ ಬಾಡಿಗೆ ಬಾಬ್ತು ರೂ.500/– ಮುಖಬೆಲೆಯ 2 ನೋಟುಗಳು ಅಂದರೆ ರೂ.1,000/– ಗಳನ್ನು ಆರೋಪಿಗಳು ನೀಡಿದ್ದು ಆ 2 ನೋಟುಗಳನ್ನು ಜಪ್ತು ಮಾಡಿದ್ದೇನೆ.

25. ಸದರಿ ಮು.ಮಾ.37 ಕಾರನ್ನು ಠಾಣೆಯ ಬಳಿ ತರಿಸಿಕೊಂಡು ರಾಸಾಯನಿಕ ನ್ಯಾಯ ಪ್ರಯೋಗಾಲಯದ ಅಧಿಕಾರಿಗಳನ್ನು ಕರೆಯಿಸಿಕೊಂಡು ಕಾರನ ಡಿಕ್ಕಿಯಲ್ಲಿದ್ದ, ಡಿಕ್ಕಿಲಾಕ್ ನಲ್ಲಿದ್ದ, ಹಾಗೂ ಬಂಪರ್ ಮೇಲೆ ಇದ್ದ ಸ್ವಾಬ್‌ಗಳನ್ನು 11:00 ರಿಂದ 12:00

ಗಂಟೆಯವರೆಗೆ ಪಂಚನಾಮೆ ಮಾಡಿ ಜಪ್ತು ಮಾಡಲಾಗಿದೆ. ಅದನ್ನು ಈಗಾಗಲೇ ನಿಪಿ-43 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-43(ಸಿ) ಎಂದು ಗುರುತಿಸಲಾಯಿತು.

26. ದಿನಾಂಕಃ03.04.2019 ರಂದು 1ನೇ ಆರೋಪಿ ಸತೀಶ ಕೃತ್ಯದ ಸಮಯದಲ್ಲಿ ತಾನು ಧರಿಸಿದ ಬಟ್ಟೆಗಳನ್ನು ಹಾಜರುಮಾಡುವುದಾಗಿ ಮತ್ತು ಕೃತ್ಯಕ್ಕೆ ಬಳಸಿದ ದ್ವಿಚಕ್ರ ವಾಹನವನ್ನು ಹಾಜರುಮಾಡುವುದಾಗಿ ಹೇಳಿಕೆ ನೀಡಿದ್ದರಿಂದ ಚಾಸಾ-12 ದೀಲಿಪ್ ಮತ್ತು ಚಾಸಾ-9 ಅರ್ಜುನ ಅವರುಗಳನ್ನು ಕರೆದಕೊಂಡು ಅಕೋಳ ವೃತ್ತ, ಮುರುಗೋಡ ಬ್ರಿಡ್ಜ ನ ಹತ್ತಿರ ಇರುವ ಆದರ್ಶ ನಗರ ಹತ್ತಿರ ಇರುವ ಶನಿ ದೇವರ ಗುಡಿಯ ಹತ್ತಿರ ಒಂದು ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ತಾನು ವಾಸವಾಗಿರುವುದಾಗಿ ಹೇಳಿ, ಸದರಿ ಆ ಮನೆಯ ಮುಂದೆ ನಿಲ್ಲಿಸಲಾಗಿದ್ದ ಹಿರೋಹೊಂಡಾ ಸ್ಟೆಂಡರ ಕೆಎ-23/ಇಎನ್-1359 ಮೋಟರ್ ಸೈಕಲ್ ನ್ನು ಕೃತ್ಯ ಎಸಗಲು ಸಂಚು ರೂಪಿಸಿ ಉಪಯೋಗಿಸಿಲಾಗಿತ್ತು ಎಂದು ಹೇಳಿ ಹಾಜರುಮಾಡಿದನು. ನಾನು ಅದನ್ನು ಜಪ್ತು ಮಾಡಿದ್ದೇನೆ ಮತ್ತು 1ನೇ ಆರೋಪಿ ಆತನ ಮನೆಯೊಳಗೆ ಕರೆದುಕೊಂಡು ಹೋಗಿ ಕೃತ್ಯದ ಸಮಯದಲ್ಲಿ ಧರಿಸಿದ ಬಟ್ಟೆಗಳಾದ ಕಪ್ಪು ಬಣ್ಣದ ಶರ್ಟ್, ಬಿಳಿ ಮಿಶ್ರಿತ ಬೂದಿ ಬಣ್ಣದ ಪ್ಯಾಂಟ್ ನ್ನು ಹಾಗೂ ಒಂದು ಇಂಟೆಕ್ಸ ಕಂಪನಿಯ ಟಚ್ ಸ್ಕ್ರಿನ್ ಮೊಬೈಲ್ ನ್ನು ಹಾಜರುಮಾಡಿದನು. ನಾನು ಅವುಗಳನ್ನು ನಿಪಿ-48 ರಂತೆ ಮದ್ಯಾಹ್ನ 12:15 ರಿಂದ 13:45 ಗಂಟೆಯವರೆಗೆ ಜಪ್ತು ಮಾಡಿ ಪಂಚನಾಮೆ ಮಾಡಿದ್ದೇನೆ. ಪಂಚನಾಮೆಯದಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-48(ಸಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆಯಲಾದ ಪೋಟೋಗಳನ್ನು ಈಗಾಗಲೇ ನಿಪಿ-37, ನಿಪಿ-38, ನಿಪಿ-39 ಎಂದು ಗುರುತಿಸಲಾಗಿದೆ. ನಿಪಿ-38 ರಲ್ಲಿ ಕಾಣುವ ಮೊಟರ್ ಸೈಕಲ್ ನ್ನು 1ನೇ ಆರೋಪಿಯ ತಾಯಿ ಶ್ರೀಮತಿ.ಸುವರ್ಣಾ ಸಹಜಿ ಯವರು

ನ್ಯಾಯಾಲಯದ ಮಧ್ಯಂತರ ಆದೇಶದ ಮೇರೆಗೆ ಮಚ್ಚಳಿಕೆ ಬರೆದುಕೊಟ್ಟು ತಮ್ಮ ವಶಕ್ಕೆ ಪಡೆದಿರುತ್ತಾರೆ. ಆ ಸಮಯದಲ್ಲಿ ತೆಗೆಯಲಾದ ದ್ವಿಚಕ್ರ ವಾಹನದ ಪೋಟೋವನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಸಾಕ್ಷಿಯಾಗಿ ಗುರುತಿಸಿಲು 1ನೇ ಆರೋಪಿ ಪರ ವಕೀಲರು ತಕರಾರ ಇಲ್ಲ ಎಂದು ಹೇಳಿರುವುದರಿಂದ ಕೆಎ–23/ಇಎನ್–1359 ಮೋಟರ್ ಸೈಕಲ್ ಮು.ಮಾ–38 ಎಂದು ಗುರುತಿಸಲಾಯಿತು. ಸದರಿ ಬಟ್ಟೆಗಳನ್ನು ಮತ್ತು ಮೊಬೈಲ್ ನ್ನು ಗುರುತಿಸಿದ್ದಾರೆ. ಬಟ್ಟೆಗಳನ್ನು ಮು.ಮಾ–12 ಮತ್ತು ಮು.ಮಾ.13 ಎಂದು ಗುರುತಿಸಲಾಗಿದೆ. ಮೊಬೈಲ್ ನ್ನು ಮು.ಮಾ.14 ಎಂದು ಗುರುತಿಸಲಾಗಿದೆ.

27. ದಿನಾಂಕಃ 03.04.2019 ರಂದು 2ನೇ ಆರೋಪಿ ಸೌರಭ ಅಥಣಿ ಇತನು ಕೃತ್ಯದ ಸಮಯದಲ್ಲಿ ಧರಿಸಿದ ಬಟ್ಟೆಗಳು ಮತ್ತು ಕೃತ್ಯಕ್ಕೆ ಉಪಯೋಗಿಸಿದ ಮೊಟರ್ ಸೈಕಲ್ ಹಾಜರುಮಾಡುತ್ತೇನೆಂದು ಹೇಳಿ ಚಾಸಾ–6 ನೂತನ್ ರಾಜ್, ಚಾಸಾ–7 ರಾಜು ಹಿರೇಮಠ ಅವರುಗಳನ್ನು ಠಾಣೆಗೆ ಕರೆಯಿಸಿಕೊಂಡು, 2ನೇ ಆರೊಪಿ ಹೇಳಿದಂತೆ ನಿಪ್ಪಾಣಿ ನಗರದ ಶಿವಾಜಿ ನಗರದ 4ನೇ ಲೈನ್ ನಲ್ಲಿರುವ ದಾನೇಶ್ವರ ಎಂಬ ಹೆಸರಿನ ಮನೆಗೆ ಕರೆದುಕೊಂಡು ಹೋಗಿ ತೋರಿಸಿ ತಾನು ಇದೆ ಮನೆಯಲ್ಲಿ ವಾಸವಾಗಿದ್ದೇನೆಂದು ಹೇಳಿ ಮನೆಯ ಕೌಂಪೌಂಡ್ ನಲ್ಲಿ ನಿಲ್ಲಿಸಿದ ಒಂದು ಹಿರೋ ಹೋಂಡಾ ಸ್ಪೆಂಡರ್ ಪ್ಲಸ್ ನಂಬರ ಕೆಎ–23/ಎಸ್179 ದ್ವಿಚಕ್ರ ವಾಹನವನ್ನು ತೋರಿಸಿ ಹಾಜರು ಮಾಡಿದನು ಮತ್ತು ಮನೆಯ ಒಳಗೆ ಕರೆದುಕೊಂಡು ಹೋಗಿ ತನ್ನ ಬೆಡ್ ರೂಮ್ ನಲ್ಲಿದ್ದ ಬಟ್ಟೆ ಗಳಾದ ನೀಲಿ ಬಣ್ಣದ ಮೇಲೆ ಬಿಳಿ ಬಣ್ಣದ ಗೆರೆಗಳಿರುವ ಟಿ–ಶರ್ಟ್ ನ್ನು ಹಾಗೂ ನೀಲಿ, ಕೆಂಪು, ಹಳದಿ, ಮತ್ತು ಬೂದಿ ಬಣ್ಣದ ಮಿಶ್ರಿತ ಒಂದು ಬರಮೊಡಾವನ್ನು ಹಾಜರು ಮಾಡಿದನು. ನಾನು ಅವುಗಳನ್ನು 14:00 ಯಿಂದ 15:00 ಗಂಟೆಯವರೆಗೆ ನಿಪಿ–23 ರಂತೆ ಪಂಚನಾಮೆ ಮಾಡಿದ್ದೇನೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–23(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ–21 ಮತ್ತು ನಿಪಿ–22 ರಂತೆ

ಫೋಟೋಗಳನ್ನು ತೆಗೆಯಲಾಯಿತು. 2ನೇ ಆರೋಪಿ ಹಾಜರುಮಾಡಿದ ಬಟ್ಟೆಗಳನ್ನು ಮು.ಮಾ.5 ಮತ್ತು ಮು.ಮಾ.6 ಎಂದು ಗುರುತಿಸಲಾಗಿದೆ. ಜಪ್ತಾದ ಮೊಟರ್ ಸೈಕಲ್ ನ್ನು ಗುರುತಿಸಿದ್ದು, ಅದು ಠಾಣೆಯ ಆವರಣದಲ್ಲಿ ಇರುತ್ತದೆ. ಅದು ಚಲಿಸುವ ಸ್ಥಿತಿಯಲ್ಲಿರುವುದಿಲ್ಲ ಎಂದು ಪೋಲಿಸರು ಮೌಖಿಕವಾಗಿ ಹೇಳಿದ್ದಾರೆ. ನಿಪಿ–21 ರಲ್ಲಿ ಕಾಣುವ ದ್ವಿಚಕ್ರ ವಾಹನವನ್ನು ಮು.ಮಾ–39 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಗಾಗಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.